ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಮೀನುಗಾರಿಕಾ ಮಹಾವಿದ್ಯಾಲಯ,

ಮಂಗಳೂರು – 575002,

ಸಂಖ್ಯೆ:ಮೀ.ಕಾ.ಮ/ಹರಾಜು/2023-24

ದಿನಾಂಕ: 23.01.2024

ಹರಾಜು ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕಾಲೇಜಿನ ವಿವಿಧ ವಿಭಾಗಗಳ ಅನುಪಯುಕ್ತ ವಸ್ತುಗಳಾದ ವಿವಿಧ ಬಿಡಿ ಭಾಗಗಳು, ಲ್ಯಾಬೋರೇಟರಿ ಉಪಕರಣಗಳು, ಹಳೆಯ ಸಾಮಾಗ್ರಿಗಳು ಇತ್ಯಾದಿಗಳನ್ನು ಎಲ್ಲಿ ಹೇಗಿದೆಯೋ ಹಾಗೆ, ಈ ಕೆಲಸಕ್ಕೆ ನಿಯೋಜಿಸಲ್ಪಟ್ಟ ಅಧಿಕಾರಿಗಳ ಮುಖಾಂತರ ಈ ಕೆಳಗಿನ ಶರ್ತಗೊಳಪಟ್ಟು ಸಾರ್ವಜನಿಕ ಹರಾಜು ಹಾಕಲಾಗುವುದು.

| ಕ್ರ.ಸಂ | ಹರಾಜಿನ ಸ್ಥಳ | ಹರಾಜಿನ ದಿನಾಂಕ | ಹರಾಜಿನ ವೇಳೆ |
|---|---|---|---|
| 1. | ಮೀ.ಕಾ.ಮ. ಮಂಗಳೂರು | 16.02.2024 | 10.30 ಪೂರ್ವಾಹ್ನ |
| 2. | ಮೀ.ಕಾ.ಮ. ತಾಂತ್ರಿಕ ವಿಭಾಗ, ಹೊಯಿಗೆ ಬಜಾರ್ | 16.02.2024 | 3.00 ಅಪರಾಹ್ನ |

ಷರತ್ತು ಮತ್ತು ನಿಬಂಧನೆಗಳು:-

1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಪ್ರಾರಂಭಕ್ಕೆ ಒಂದು ದಿನ ಮುಂಚಿತವಾಗಿ ರೂ.10,000/- ದ ಭದ್ರತಾ ಠೇವಣಿಯನ್ನು ಪಾವತಿಸಿ ತಾತ್ಕಲಿಕ ರಶೀದಿ ಪಡೆಯಬೇಕು. ಇವರು ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.
2) ಆಸಕ್ತರು ಹರಾಜಿನ ವಸ್ತು/ಉಪಕರಣಗಳನ್ನು ಕಛೇರಿ ಸಮಯದಲ್ಲಿ ಪೂರ್ವಾನುಮತಿ ಪಡೆದು ವೀಕ್ಷಿಸಬಹುದು.
3) ಬಿಡ್ದುದಾರರಿಗೆ ಭದ್ರತಾ ಠೇವಣಿ ಮೇಲೆ ಯಾವುದೇ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ, ಅಲ್ಲದೆ ಈ ಹರಾಜಿಗೆ ಸಂಬಂಧ ಪಟ್ಟಂತೆ, ಯಾವುದೇ ನಷ್ಟ ಉಂಟಾದಲ್ಲಿ ಅದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಲ್ಲ.
4) ಅತಿ ಹೆಚ್ಚು ಮೊತ್ತ ಸೂಚಿಸುವ ಬಿಡ್ಡುದಾರನು, ಖರೀದಿಗೆ ಅರ್ಹನಾಗುತ್ತಾನೆ. ಹಾಗೂ ಈ ಬಗ್ಗೆ ಹರಾಜು ಮೊತ್ತವನ್ನು ಪುಷ್ಠಿಕರಿಸಿದ ಕೂಡಲೇ ಪೂರ್ಣ ಮೊತ್ತವನ್ನು ಪಾವತಿಸಬೇಕು. ಇದಕ್ಕೆ ತಪ್ಪಿದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿ ಮರು ಹರಾಜಿಗೆ ಕ್ರಮ ಕೈಗೊಳ್ಳಲಾಗುವುದು.
5) ಯಶಸ್ವೀ ಬಿಡ್ಡುದಾರನೆಂದು ಘೋಷಿಸಲ್ಪಟ್ಟ ಬಿಡ್ಡುದಾರರು ಸದ್ರಿ ಹರಾಜಿಗೆ ಒಳಪಟ್ಟ ವಸ್ತುಗಳನ್ನು 3 ದಿನಗಳೊಳಗೆ ಸಾಗಿಸಬೇಕು.
6) ಯಶಸ್ವೀ ಬಿಡ್ಡುದಾರರು ಸದ್ರಿ ವಸ್ತುಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕಛೇರಿ ಸಮಯದಲ್ಲಿ, ಹರಾಜಿನ ಕೆಲಸಕ್ಕೆ ನಿಯುಕ್ತ ಪಡಿಸಿದ ಅಧಿಕಾರಿಗಳ ಸಮ್ಮುಖದಲ್ಲಿ ಸಾಗಿಸಬೇಕು.
7) ಸದರಿ ವಸ್ತುಗಳನ್ನು ಸಾಗಿಸುವಾಗ ಕಾಲೇಜಿನ ಕಟ್ಟಡಗಳಿಗೆ ಹಾನಿಯಾಗದಂತೆ ಮತ್ತು ಕೆಲಸ ಕಾರ್ಯಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು.
8) ಹರಾಜಿಗಿಡಲ್ಪಟ್ಟ ವಸ್ತು/ಉಪಕರಣಗಳನ್ನು ಅನುಕೂಲಕ್ಕನುಗುಣವಾಗಿ ಪ್ರತ್ಯೇಕ ರಾಶಿ ಅಥವಾ ಒಂದೇ ರಾಶಿಯಡಿಯಲ್ಲಿ ಹರಾಜು ಮಾಡುವ ಅಧಿಕಾರವನ್ನು ಈ ಕೆಳಗೆ ಸಹಿಮಾಡಿರುವ ಅಧಿಕಾರಿಯವರು ಹೊಂದಿರುತ್ತಾರೆ.
9) ಹರಾಜಿನ ಯಾವುದೇ ಹಂತದಲ್ಲಿ ಹರಾಜಿನ ಮೊತ್ತವನ್ನು ಒಪ್ಪಿಕೊಳ್ಳುವ, ನಿರಾಕರಿಸುವ ಅಥವಾ ಹರಾಜು ಪ್ರಕ್ರಿಯೆಯನ್ನು ಯಾವುದೇ ಕಾರಣ ನೀಡದೆ ಸ್ಥಗಿತಗೊಳಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರು ಹೊಂದಿರುತ್ತಾರೆ.

ಡೀನ್ (ಮೀನುಗಾರಿಕೆ)

DEAN (FISHERIES)
College of Fisheries
Mangalore - 2

ಪ್ರತಿಯನ್ನು ಸಲ್ಲಿಸಿದೆ:

1) ಹಣಕಾಸು ನಿಯಂತ್ರಣಾಧಿಕಾರಿ, ಕ.ಪ.ಪ.ಮೀ.ವಿ.ವಿ., ಬೀದರ ರವರ ಮಾಹಿತಿಗಾಗಿ

ಪ್ರತಿಯನ್ನು ಈ ಕೆಳಗಿನವರಿಗೆ ನೀಡಲಾಗಿದೆ :-

1) ಆಯುಕ್ತರು, ಮಂಗಳೂರು ಮಹಾನಗರ ಪಾಲಿಕೆ, ಮಂಗಳೂರು
2) ಸೂಚನಾ ಫ಼ಲಕ, ಮುಖ್ಯ ಆವರಣ
3) ಸೂಚನಾ ಫಲಕ, ತಾಂತ್ರಿಕ ವಿಭಾಗ ಹೊಯಿಗೆ ಬಜಾರ್

} ಅವರವರ ಕಛೇರಿಯ ಸೂಚನಾ ಫ಼ಲಕದಲ್ಲಿ ಪ್ರದರ್ಶಿಸಲು ಕೋರಿಕೆಯೊಂದಿಗೆ

4) ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ ಅವರವರ ವಿಭಾಗದಲ್ಲಿ ಲಭ್ಯವಿರುವ ಅನುಪಯುಕ್ತ ವಸ್ತುಗಳನ್ನು ದಿನಾಂಕ 13.02.2024 ರಿಂದ 15.02.2024ರ ವರೆಗೆ ಬಿಡ್ಡುದಾರರಿಗೆ ವೀಕ್ಷಿಸಲು ಅನುವಾಗುವಂತೆ ಸಿದ್ದಪಡಿಸಿಡಬೇಕೆಂದು ವಿನಂತಿಯೊಂದಿಗೆ (ಅನುಪಯುಕ್ತ ವಸ್ತುಗಳ ಪಟ್ಟಿಯಂತ
5) ಡೀನ್ (ಮೀ) ಮತ್ತು ಸ್ಥಳೀಯ ಹರಾಜು ಸಮಿತಿಯ ಚೇರ್‌ಮನ್
6) ಸ್ಥಳೀಯ ಹರಾಜು ಸಮಿತಿಯ ಎಲ್ಲ ಸದಸ್ಯರುಗಳಿಗೆ ಹರಾಜಿನ ವೇಳೆ ಹಾಜರಿರುವ ಬಗ್ಗೆ ಮಾಹಿತಿಗಾಗಿ
7) ಸ್ಥಳೀಯ ಮಾರುಕಟ್ಟೆಯಲ್ಲಿ ಹರಾಜಿನ ಬಗ್ಗೆ ಮಾಹಿತಿಗಾಗಿ